ಪಡೆಯಲಿದ್ದಾರೆ. ಜೂನ್ ಪಟ್ಟಿಯಲ್ಲಿ ಗುಕೇಶ್ ಆರನೇ ಮತ್ತು ವಿಶ್ವನಾಥನ್ ಆನಂದ್ 11ನೇ ಸ್ಥಾನದಲ್ಲಿದ್ದಾರೆ. ದೇಶದ ಚೆಸ್ ಆಟಗಾರರ ಪಾಲಿಗೆ ಆದರ್ಶಪ್ರಾಯರಾದ, 54 ವರ್ಷದ ಆನಂದ್ ಮೊದಲ ಬಾರಿ (2000ರಲ್ಲಿ) ವಿಶ್ವ ಚಾಂಪಿಯನ್ ಕಿರೀಟ ಧರಿಸಿದಾಗ ಇವರ್‍ಯಾರೂ ಹುಟ್ಟಿರಲಿಲ್ಲ! ಅರ್ಜುನ್ ಕೆಲಕಾಲ 2771.2 ಲೈವ್ ರೇಟಿಂಗ್ ತಲುಪಿದ್ದರು. ವಿಶ್ವನಾಥನ್ ಆನಂದ್ ನಂತರ ಈ ರೇಟಿಂಗ್ ತಲುಪಿದ ಮೊದಲ ಭಾರತೀಯ ಅರ್ಜುನ್.

ಆದರೆ ಅವರು ದಿಢೀರನೆ ಈ ಸ್ಥಾನಕ್ಕೇರಲಿಲ್ಲ. ಈ ಟೂರ್ನಿಗೆ ಮೊದಲೇ ಅವರು ಪ್ರಮುಖ ಟೂರ್ನಿಗಳಲ್ಲಿ ಸ್ಥಿರ ಆಟದ ಪ್ರದರ್ಶನ ನೀಡುತ್ತ ಬಂದಿದ್ದರು. ಏಪ್ರಿಲ್‌ನಲ್ಲಿ ನಡೆದ ಮೆನೋರ್ಕಾ (ಸ್ಪೇನ್) ಓಪನ್‌ನಲ್ಲಿ ಚಾಂಪಿಯನ್ ಕಿರೀಟ ಧರಿಸಿದ್ದರು. ಮೇ ತಿಂಗಳಲ್ಲಿ ಸ್ವೀಡನ್‌ನಲ್ಲಿ ನಡೆದ ಟೆಪೆ ಸಿಗೆಮನ್ ಟೂರ್ನಿಯಲ್ಲಿ ರನ್ನರ್ ಅಪ್ ಸ್ಥಾನ. ಅಗ್ರಸ್ಥಾನಕ್ಕೆ ನಾಡಿರ್ಬೆಕ್ ಅಬ್ದುಸತ್ತಾರೋವ್ ಮತ್ತು ಪೀಟರ್ ಸ್ವಿಡ್ಲರ್ ಜೊತೆ ಸಮಾನ ಪಾಯಿಂಟ್ಸ್ ಗಳಿಸಿದ್ದರಿಂದ ಟೈಬ್ರೇಕ್ ಆಡಲಾಗಿತ್ತು. ಪ್ರಬಲ ಕಣ ಹೊಂದಿದ್ದ ಶಾರ್ಜಾ ಮಾಸ್ಟರ್ಸ್ ಚೆಸ್ ಟೂರ್ನಿಯಲ್ಲಿ ಅವರಿಗೆ ಏಳನೇ ಸ್ಥಾನ ದೊರಕಿತ್ತು.

1980ರ ದಶಕದಲ್ಲಿ ವಿಶ್ವನಾಥನ್ ಆನಂದ್ ಭಾರತದಲ್ಲಿ ಚೆಸ್ ಕ್ರಾಂತಿಗೆ ಮುನ್ನುಡಿ ಬರೆದಿದ್ದರು. ಅವರಿಂದ ಪ್ರೇರಣೆ ಪಡೆದ ಹಲವು ಆಟಗಾರರು ನಂತರದ ವರ್ಷಗಳಲ್ಲಿ ಉತ್ತಮ ಸಾಧನೆ ತೋರುತ್ತಿದ್ದಾರೆ. ಎರಡು ತಿಂಗಳ ಹಿಂದೆ ಕ್ಯಾಂಡಿಡೇಟ್ಸ್ ಚೆಸ್ ಟೂರ್ನಿಯಲ್ಲಿ ಭಾರತದ ಐವರು ಆಡಿದ್ದು ಕಡಿಮೆ ಸಾಧನೆಯಾಗಿರಲಿಲ್ಲ. ಅದರಲ್ಲೂ ಪ್ರಜ್ಞಾನಂದ, ಅರ್ಜುನ್, ಗುಕೇಶ್, ವಿದಿತ್ ಗುಜರಾತಿ ಇತ್ತೀಚಿನ ದಿನಗಳಲ್ಲಿ ಹಲವು ಪ್ರಮುಖ ಟೂರ್ನಿಗಳಲ್ಲಿ ಅಮೋಘ ಪ್ರದರ್ಶನ ನೀಡಿದ್ದಾರೆ.

## ಯಶಸ್ಸಿನ ಅರ್ಜುನಪಥ!

ತೆಲಂಗಾಣದ ವಾರಂಗಲ್‌ನಲ್ಲಿ ಜನಿಸಿದ (3–9–2003) ಅರ್ಜುನ್ ಅವರ ತಂದೆ ಶ್ರೀನಿವಾಸ್ ಕುಮಾರ್ ನ್ಯೂರೊಸರ್ಜನ್. ತಾಯಿ ಜ್ಯೋತಿ ಗೃಹಿಣಿ. ಹನುಮಕೊಂಡದ 'ಬಿ.ಎಸ್. ಚೆಸ್ ಅಕಾಡೆಮಿ'ಯಲ್ಲಿ ಬಿ. ಸಂಪತ್ ಅವರಿಗೆ ಆರಂಭದ ಕೋಚ್. ಈಜು, ಸ್ಕೇಟಿಂಗ್ ಜೊತೆ ಹವ್ಯಾಸವಾಗಿ ಕಲಿತ ಈ ಆಟ ಅವರಿಗೆ ಅಚ್ಚುಮೆಚ್ಚಿನದಾಯಿತು. 2015ರಲ್ಲಿ ಕೊರಿಯಾದಲ್ಲಿ ನಡೆದ ಏಷ್ಯನ್ ಯೂತ್ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕ ಗೆದ್ದಿದ್ದು ಅವರಿಗೆ ದೊರೆತ ಮೊದಲ ಪ್ರಮುಖ ಯಶಸ್ಸು.

2018ರಲ್ಲಿ ಅವರು ಭಾರತದ 54ನೇ ಗ್ರ್ಯಾಂಡ್‌ಮಾಸ್ಟರ್ ಎನಿಸಿದರು. ಆಗ ವಯಸ್ಸು 14 ವರ್ಷ 11 ತಿಂಗಳು. ಈ ಸಾಧನೆಗೆ ಪಾತ್ರರಾದ ತೆಲಂಗಾಣದ ಮೊದಲನೆಯವರು. ಅದೇ ವರ್ಷ, ಅವರಿಗಿಂತ ಮೊದಲು ಭಾರತದ ಇನ್ನಿಬ್ಬರು ಪ್ರತಿಭಾನ್ವಿತರು ಈ ಬಿರುದು ಪಡೆದಿದ್ದರು. ಚೆನ್ನೈನ ಪ್ರಜ್ಞಾನಂದ ದೇಶದ 52ನೇ ಗ್ರ್ಯಾಂಡ್‌ಮಾಸ್ಟರ್ ಆದರೆ, ಕೇರಳದ ನಿಹಾಲ್ ಸರಿನ್ 53ನೇ ಜಿಎಂ ಎನಿಸಿದರು. (ಈಗ ದೇಶದಲ್ಲಿ 85 ಮಂದಿ ಜಿಎಂ ಆಗಿದ್ದಾರೆ).




ವಿಶೇಷ ಎಂದರೆ, 2018ರ ಆರಂಭದಲ್ಲಿ ಅರ್ಜುನ್ ಅವರು ಇಂಟರ್‌ನ್ಯಾಷನಲ್ ನಾರ್ಮ್ ಕೂಡ ಪಡೆದಿರಲಿಲ್ಲ. ಅತಿವೇಗವಾಗಿ ಐಎಂ ಪಟ್ಟದಿಂದ ಜಿಎಂ ಪಟ್ಟಕ್ಕೇರಿದ ಹಿರಿಮೆ ಅವರದು. ಜನವರಿಯಲ್ಲಿ ಕೋಲ್ಕತ್ತದಲ್ಲಿ ಮೊದಲ ಐಎಂ ನಾರ್ಮ್. ಜೊತೆಗೆ 2500 ರೇಟಿಂಗ್ ಮೈಲಿಗಲ್ಲು ತಲುಪಿದ್ದರು. ಮಾರ್ಚ್‌ನೊಳಗೆ ಮತ್ತೆರಡು ಐಎಂ ನಾರ್ಮ್ ದಕ್ಕಿತು. ಕೋಲ್ಕತ್ತದಲ್ಲಿ ಮೊದಲ ಜಿಎಂ ನಾರ್ಮ್ ಪಡೆದ ಅರ್ಜುನ್, ಜುಲೈನಲ್ಲಿ ಯೂರೋಪಿನ ಟೂರ್ನಿಗಳಲ್ಲಿ ಆಡಿ ಮತ್ತೊಂದು ಜಿಎಂ ನಾರ್ಮ್ ಗಿಟ್ಟಿಸಿದರು. ಆಗಸ್ಟ್‌ನಲ್ಲಿ ಅಬುಧಾಬಿ ಟೂರ್ನಿಯಲ್ಲಿ ಮೂರನೇ ನಾರ್ಮ್ ಮೂಲಕ ಜಿಎಂ ಪಟ್ಟ. 2021ರಲ್ಲಿ ಅವರು ಚಾಂಪಿಯನ್ಸ್ ಗ್ರ್ಯಾಂಡ್ ಟೂರ್ ಭಾಗವಾದ 'ಗೋಲ್ಡ್‌ಮನಿ ಏಷ್ಯನ್ ರ್‍ಯಾಪಿಡ್ ಚೆಸ್ ಟೂರ್ನಿ'ಗೆ (ಆನ್‌ಲೈನ್) ಅಂತಿಮ ಸುತ್ತಿನಲ್ಲಿ ಸ್ಥಾನ ಪಡೆದ ಭಾರತದ ಮೊದಲ ಆಟಗಾರ ಎನಿಸಿ, ಚೆಸ್ ಜಗತ್ತಿನ ಗಮನಸೆಳೆದರು. ವಿದಿತ್ ಗುಜರಾತಿ, ಡೇನಿಯಲ್ ಡುಬೊವ್, ಪೀಟರ್ ಸ್ವಿಡ್ಲರ್, ಡಿ. ಗುಕೇಶ್ ಮೊದಲಾದ ಆಟಗಾರರನ್ನು ಹಿಂದೆ ಹಾಕಿದ್ದರು. ಅದೇ ವರ್ಷ ಬಲ್ಗೇರಿಯಾದಲ್ಲಿ ನಡೆದ ರೌಂಡ್‌ಟೇಬಲ್ ಓಪನ್ ಚೆಸ್ ಚಾಂಪಿಯನ್‌ಷಿಪ್‌ನ 21 ವರ್ಷದೊಳಗಿನವರ ವಿಭಾಗದಲ್ಲಿ ರನ್ನರ್ ಅಪ್ ಸ್ಥಾನ ಪಡೆದರು.

2022ರ ಜನವರಿಯಲ್ಲಿ ಅವರು ಟಾಟಾ ಸ್ಟೀಲ್ ಚೆಸ್ ಟೂರ್ನಿಯ ಚಾಲೆಂಜರ್ ವಿಭಾಗದಲ್ಲಿ ವಿಜೇತರಾದರು. ಮಾಸ್ಟರ್ಸ್ ವಿಭಾಗದಲ್ಲಿ ಆಡುವ ಅರ್ಹತೆಯನ್ನೂ ಇದು ನೀಡಿತು. ಟೂರ್ನಿಯಲ್ಲಿ ಅವರು 2800+ ರೇಟಿಂಗ್ ಮಟ್ಟದ ಪ್ರದರ್ಶನ ನೀಡಿದ್ದರು. 2659ರ ರೇಟಿಂಗ್ ಮೂಲಕ ಫಿಡೆ ಕ್ರಮಾಂಕಪಟ್ಟಿಯ ಅಗ್ರ 100 ಆಟಗಾರರಲ್ಲಿ ಸ್ಥಾನ ಪಡೆದರು. ಅದೇ ವರ್ಷದ ಮಾರ್ಚ್‌ನಲ್ಲಿ ಅವರು ರಾಷ್ಟ್ರೀಯ ಚಾಂಪಿಯನ್ ಆದರು. ಕಾನ್ಪುರದಲ್ಲಿ ನಡೆದ ಆ 58ನೇ ಆವೃತ್ತಿಯ ಚಾಂಪಿಯನ್‌ಷಿಪ್‌ನಲ್ಲಿ ಅಗ್ರ ಶ್ರೇಯಾಂಕದ ಗುಕೇಶ್ ರನ್ನರ್ ಅಪ್ ಆಗಿದ್ದರು. ಅವರಿಬ್ಬರೂ 11 ಸುತ್ತುಗಳಿಂದ 8.5 ಪಾಯಿಂಟ್ಸ್ ಕಲೆಹಾಕಿದ್ದರು! ಅದೇ ವರ್ಷದ ಅಕ್ಟೋಬರ್‌ನಲ್ಲಿ ಏಮ್‌ಚೆಸ್ ರ್‍ಯಾಪಿಡ್ ಟೂರ್ನಿಯ ಏಳನೇ ಸುತ್ತಿನಲ್ಲಿ ಅಂದಿನ ವಿಶ್ವ ಚಾಂಪಿಯನ್ ಮ್ಯಾಗ್ನಸ್ ಕಾರ್ಲ್‌ಸನ್ ಅವರಿಗೆ ಸೋಲಿನ ಆಘಾತ ನೀಡಿದ್ದರು. ವಿಶ್ವ ಚಾಂಪಿಯನ್ ವಿರುದ್ಧ ಅವರು ಗೆದ್ದಿದ್ದು ಅದೇ ಮೊದಲು. ಕಳೆದ ವರ್ಷದ ಏಪ್ರಿಲ್‌ನಲ್ಲಿ ಶಾರ್ಜಾ ಮಾಸ್ಟರ್ಸ್ ಟೂರ್ನಿಯಲ್ಲಿ ಅವರು ಚಾಂಪಿಯನ್ ಪಟ್ಟ ಅವರದಾಗಿತ್ತು.

ಫ್ರೆಂಚ್ ಕ್ಲಬ್ ಚಾಂಪಿಯನ್‌ಷಿಪ್‌ನಲ್ಲಿ ಭಾರತದ ಹತ್ತು ಆಟಗಾರರು ಪಾಲ್ಗೊಂಡಿದ್ದರು. ಅದರಲ್ಲಿ ಗಮನ ಸೆಳೆದಿರುವುದು ಅರ್ಜುನ್ ಹೆಚ್ಚುಗಾರಿಕೆ. ಅನುಭವಿಗಳಾದ ಸೂರ್ಯಶೇಖರ ಗಂಗೂಲಿ, ಪಿ. ಹರಿಕೃಷ್ಣ ಜೊತೆಗೆ ಅರವಿಂದ ಚಿದಂಬರಂ, ನಿಹಾಲ್ ಸರಿನ್ ಟೂರ್ನಿಯಲ್ಲಿ ಭಾಗಿಯಾಗಿದ್ದ ಪ್ರಮುಖರು.

ಮಾಜಿ ವಿಶ್ವ ಚಾಂಪಿಯನ್ ಹಾಗೂ ವಿಶ್ವದ ಹಾಲಿ ಪ್ರಬಲ ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್ ಅವರು ಭಾರತದ ಯುವ ತಾರೆಗಳ ಬಗ್ಗೆ ಸಂದರ್ಶನವೊಂದರಲ್ಲಿ ಬಣ್ಣಿಸಿರುವುದು ಹೀಗೆ: 'ಗುಕೇಶ್ ತುಂಬಾ ಲೆಕ್ಕಾಚಾರ ಮಾಡಿ ಆಡುವವರು. ಪ್ರಜ್ಞಾನಂದ ಕೂಡ ಲೆಕ್ಕಾಚಾರದ ಆಟಗಾರನಾದರೂ, ಸುಪ್ತಗ್ರಹಿಕೆಯಿಂದಲೂ ಆಡುತ್ತಾರೆ. ಆದರೆ ಅರ್ಜುನ್ ಇರಿಗೇಶಿ, complete madman at the board. ಅವರು ಅತಿ ಮಹತ್ವಾಕಾಂಕ್ಷೆಯ ಆಟಗಾರ. ಹೀಗಾಗಿ ಅತಿ ಅಪಾಯಕಾರಿ...'

ಪ್ರತಿಕ್ರಿಯಿಸಿ: feedback@sudha.co.in